# ಪ್ರಾರ್ಥನೆ

✿ **ಭ**ಗವತಿ ನಿನ್ನ ತಾಯಿ. ಜೋರು ಮಾಡಿ ಕೇಳು. ಯಾವುದು ಯಾವುದರ ಅಂಶವೊ ಅದು ಅದರಿಂದ ಆಕರ್ಷಿತವಾಗುತ್ತದೆ. ತಾಯಿಯ ಸತ್ವ ನಮ್ಮಲ್ಲಿ ಇರುವುದರಿಂದ, ಆಕೆಯ ಕಡೆಗೆ ಅಷ್ಟೊಂದು ಸೆಳೆತ.



✿ **ನೀ**ನು ಸಂಸಾರದಲ್ಲೇನೊ ಇದ್ದೀಯೆ, ಇದ್ದರೇನು ಭಯ? ಆದರೆ ಮಾತ್ರ ಇಡಿಯ ಕರ್ಮಫಲವನ್ನು ಭಗವಂತನಿಗೆ ಅರ್ಪಿಸಿಬಿಡಬೇಕು. ನೀನು ಮಾತ್ರ ಯಾವ ಫಲವನ್ನೂ ಅಪೇಕ್ಷಿಸಕೂಡದು. ಆದರೆ ಒಂದು ವಿಷಯ, ಭಕ್ತಿ ಕಾಮನೆ ಕಾಮನೆಗಳ ಗುಂಪಿಗೆ ಸೇರಿದುದಲ್ಲ. ಭಕ್ತಿ ಕಾಮನೆಯನ್ನು, ಭಕ್ತಿ ಪ್ರಾರ್ಥನೆಯನ್ನು ಮಾಡಬಹುದು. ಭಕ್ತಿಯ ತಾಮಸಿಕ ಭಾಗವನ್ನು ಉಪಯೋಗಿಸು.

✿ **ಭಕ್ತ:** ಮಹಾಶಯರೆ, ಜನರಿಗೆ ವಿರಾಮವೆಲ್ಲಿ? ಆಂಗ್ಲ ಧಣಿಗಳ ಸೇವೆ ಮಾಡಬೇಕಾಗಿದೆ.

**ಶ್ರೀರಾಮಕೃಷ್ಣರು:** ಒಳ್ಳೇದು. ಹಾಗಾದರೆ ಆತನಿಗೆ ವಕಾಲತ್ತು ವಹಿಸಿಬಿಡು. ಯಾರೆ ಆಗಲಿ ಒಳ್ಳೆಯವರ ಮೇಲೆ ತನ್ನ ಜವಾಬ್ದಾರಿಯನ್ನು ಹೊರಿಸಿದ್ದರೆ ಅವರು ಆತನಿಗೆ ಕೇಡುಮಾಡುವರೆ? ಹೃತ್ಪೂರ್ವಕವಾಗಿ ಭಾರವನ್ನೆಲ್ಲ ಭಗವಂತನ ಮೇಲೆ ಹಾಕಿ ನಿಶ್ಚಿಂತನಾಗಿ ಇದ್ದುಬಿಡು. ಆತ ನಿನ್ನನ್ನು ಯಾವ ಕೆಲಸವನ್ನು ಮಾಡುವಂತೆ ಪ್ರೇರೇಪಿಸುವನೋ ಅದನ್ನು ಮಾಡು. ಬೆಕ್ಕಿನ ಮರಿಗೆ ಲೆಕ್ಕಾಚಾರ ಬುದ್ಧಿ ಇಲ್ಲ; ಅದು ಸುಮ್ಮನೆ 'ಮಿಯಾವ್, ಮಿಯಾವ್!' ಅನ್ನುತ್ತದೆ. ತಾಯಿಬೆಕ್ಕು ಅದನ್ನು ತೆಗೆದುಕೊಂಡು ಹೋಗಿ ಅಡುಗೆಮನೆಯಲ್ಲಿ ಒಲೆ ಬೂದಿಯೊಳಗೆ ಇಟ್ಟರೆ, ಅಲ್ಲಿಯೆ ಸುಮ್ಮನೆ ಬಿದ್ದಿರುತ್ತದೆ. ತಾಯಿ ಬೇಕಾಗಿದ್ದರೆ ಮಾತ್ರ ಕೇವಲ, 'ಮಿಯಾವ್, ಮಿಯಾವ್!' ಅನ್ನುತ್ತದೆ. ತಾಯಿಬೆಕ್ಕು ಮತ್ತೆ ಅದನ್ನು ತೆಗೆದುಕೊಂಡುಹೋಗಿ ಮನೆ ಯಜಮಾನನ ಹಾಸಿಗೆ ಮೇಲೆ ಇಟ್ಟಾಗಲೂ ಆ ಮರಿ ಎಂದಿನಂತೆಯೇ ವರ್ತಿಸುತ್ತದೆ. ಕೇವಲ, 'ಮಿಯಾವ್, ಮಿಯಾವ್!' ಅನ್ನುತ್ತದೆ.

✿ **ಭಕ್ತ:** ವಿಷಯರಸವನ್ನು ಒಣಗಿಸಲು ಉಪಾಯವೇನು?

**ಶ್ರೀರಾಮಕೃಷ್ಣರು:** ವ್ಯಾಕುಲನಾಗಿ ಭಗವತಿಯನ್ನು ಕರೆ. ಆಕೆಯ ದರ್ಶನ ದೊರೆತರೆ ವಿಷಯರಸ ಒಣಗಿಹೋಗಿಬಿಡುತ್ತದೆ; ಕಾಮಕಾಂಚನ ಆಸಕ್ತಿ ಎಲ್ಲಾ ಬಿಟ್ಟು ಹೋಗುತ್ತದೆ. ಆಕೆ ನಿನ್ನ ಸ್ವಂತ ತಾಯಿ ಎಂಬ ಬೋಧೆ ಉಂಟಾದರೆ ಈ ಕ್ಷಣವೇ ಹಾಗಾಗಿಬಿಡುತ್ತದೆ.

✿ **ವ್ಯಾ**ಕುಲ ಹೃದಯದಿಂದ ಆತನಿಗೆ ಪ್ರಾರ್ಥನೆ ಸಲ್ಲಿಸು ; ಆತನಿಗಾಗಿ ಅಳು. ಆಗ ಚಿತ್ತಶುದ್ಧಿ ಉಂಟಾಗುತ್ತದೆ. ನಿರ್ಮಲವಾದ ನೀರಿನಲ್ಲಿ ಸೂರ್ಯನ ಪ್ರತಿಬಿಂಬವನ್ನು ನೋಡಬಹುದು. ಭಕ್ತನ 'ನಾನು' ಎಂಬ ರೂಪಿನ ಕನ್ನಡಿಯಲ್ಲಿ ಸಗುಣಬ್ರಹ್ಮನ, ಆದ್ಯಾಶಕ್ತಿಯ ದರ್ಶನ ದೊರೆಯುತ್ತದೆ. ಆದರೆ ಕನ್ನಡಿಯನ್ನು ಬಹಳ ಚೆನ್ನಾಗಿ ಒರೆಸಬೇಕು. ಕೊಳೆ ಕುಳಿತಿದ್ದರೆ ಸರಿಯಾದ ಪ್ರತಿಬಿಂಬ ಬೀಳದು.

✿ **ಬ್ರ**ಹ್ಮಜ್ಞಾನ ಬೇಕಾಗಿದ್ದರೆ ಆ ಪ್ರತಿಬಿಂಬ ಸೂರ್ಯನನ್ನು ಹಿಡಿದುಕೊಂಡು ನಿಜವಾದ ಸೂರ್ಯನ ಕಡೆಗೆ ಹೋಗು. ನಮ್ಮ ಪ್ರಾರ್ಥನೆ ಕೇಳುತ್ತಾನಲ್ಲ ಆ ಸಗುಣಬ್ರಹ್ಮ ಆತನನ್ನೇ ಕೇಳಿಕೊ, ಆತನೇ ಬ್ರಹ್ಮಜ್ಞಾನವನ್ನು ಕೊಡುತ್ತಾನೆ; ಹೇಗೆಂದರೆ ಯಾರು ಸಗುಣಬ್ರಹ್ಮನೊ ಆತನೇ ನಿರ್ಗುಣಬ್ರಹ್ಮ. ಯಾರು ಶಕ್ತಿಯೊ ಆತನೇ ಬ್ರಹ್ಮ. ಪೂರ್ಣಜ್ಞಾನ ದೊರೆತ ಮೇಲೆ ಈ ಅಭಿನ್ನತೆಯ ಅನುಭವ.

✿ **ಭ**ಗವಂತನಿದ್ದಾನೆ ಎಂದು ಸುಮ್ಮನೆ ಕೈಕಟ್ಟಿ ಕುಳಿತಿದ್ದರೆ ಆಗದು. ಹೇಗೊ ಮಾಡಿ ಆತನ ಹತ್ತಿರ ಹೋಗಬೇಕು. ಏಕಾಂತ ಸ್ಥಳದಲ್ಲಿ ಆತನನ್ನು ಕರೆ, ಆತನನ್ನು ಪ್ರಾರ್ಥನೆಮಾಡು, 'ನನಗೆ ನಿನ್ನ ದರ್ಶನ ಕೊಡು' ಅಂತ ವ್ಯಾಕುಲನಾಗಿ ಅಳು. ಕಾಮ ಕಾಂಚನಕ್ಕಾಗಿ ಹುಚ್ಚನ ಹಾಗೆ ಅಲೆಯಲು ಸಿದ್ಧನಾಗಿದ್ದೀಯೆ! ಈಗ ಭಗವಂತನಿಗಾಗಿ ಸ್ವಲ್ಪ ಹುಚ್ಚನಾಗು. ಜನ ಹೇಳಿಕೊಳ್ಳಲಿ, ಭಗವಂತನಿಗಾಗಿ ಆತ ಹುಚ್ಚನಾಗಿಬಿಟ್ಟ ಅಂತ. ಒಂದೆರಡು ದಿನಗಳ ಮಟ್ಟಿಗಾದರೂ ಎಲ್ಲವನ್ನೂ ತ್ಯಜಿಸಿ ಆತನನ್ನು ಏಕಾಂತದಲ್ಲಿ ಕರೆ.

✿ **ಭಕ್ತ:** ನಮ್ಮ ಮನಸ್ಸನ್ನು ಭಗವಂತನ ಪಾದಪದ್ಮಗಳಲ್ಲಿ ಇಡುವುದು ಹೇಗೆ?

**ಶ್ರೀರಾಮಕೃಷ್ಣರು:** ಅಭ್ಯಾಸಯೋಗದಿಂದ. ದಿನವೂ ಆತನನ್ನು ಕರೆಯುವ ಅಭ್ಯಾಸ ಇಟ್ಟುಕೊಂಡಿರಬೇಕು. ಒಂದೇ ದಿನದಲ್ಲಿ ಬರದು; ದಿನವೂ ಕರೆಯುತ್ತ ಕರೆಯುತ್ತ ಹೋದರೆ ವ್ಯಾಕುಲತೆ ಬಂದುಬಿಡುತ್ತದೆ.

✿ ವಿಶ್ವಾಸವಿಡು. ಭಗವತಿಯನ್ನು ಆಶ್ರಯಿಸು. ಹಾಗೆ ಮಾಡಿದರೆ, ತಾನೇ ಸ್ವತಃ ಏನೂ ಮಾಡಬೇಕಾಗಿರುವುದಿಲ್ಲ. ಭಗವತಿ ಕಾಳಿಯೇ ಎಲ್ಲವನ್ನೂ ಮಾಡಿಕೊಟ್ಟುಬಿಡುತ್ತಾಳೆ.

'ಶ್ರೀರಾಮಕೃಷ್ಣ ವಚನವೇದ'ದಿಂದ